ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ...

ಅಧ್ಯಕ್ಷರು.—ನೀವು ಬೇಕಾದರೆ ಹಾಫ್ ಆನ್ ಹವರ್ ಡಿಸ್ಕಷನ್‌ಗೆ ಹಾಕಿರಿ. ಈಗ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ನಾನು ಅಲೋ ಮಾಡುವುದಿಲ್ಲ.

ಶ್ರೀ ಆರ್. ಎನ್. ನಾಯಕ್.—ಈ ಯೋಜನೆಗಳಿಗೆ ರಾಜ್ಯ ಸರಕಾರ ಎಷ್ಟು ಹಣ ಖರ್ಚು ಮಾಡಬೇಕಾಗಿತ್ತೋ ಅಷ್ಟು ಹಣವನ್ನು ಖರ್ಚು ಮಾಡಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಅಧ್ಯಕ್ಷರೇ, ಈ ಡಿ.ಪಿ.ಎ.ಪಿ. ಯೋಜನೆಯಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಿಸಿಲ್ಲ ಎನ್ನುವುದು ಒಂದು. ಎರಡನೆಯದಾಗಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಬರಗಾಲ ಪೀಡಿತ ಪ್ರದೇಶಗಳ ಅಭಿವೃದ್ಧಿಗೆ ಹಣ ಖರ್ಚು ಮಾಡಿರುವುದು ವಿಶೇಷ ಸಂದರ್ಭಗಳಲ್ಲಿ ಮಾತ್ರ. ಮುಂಡಗೋಡು ಮುಂತಾದ ಕೆಲವು ತಾಲ್ಲೂಕುಗಳಲ್ಲಿ ಬರಗಾಲದ ವಾಯೆ ಇದೆ ಎಂಬ ಸಂದರ್ಭ ಬಂದಾಗ ಆದಕ್ಕೆ ಕಂದಾಯ ಇಲಾಖೆಯವರು ಹಣ ಖರ್ಚು ಮಾಡಿದ್ದಾರೆ. ಆದರ ವಿವರಗಳನ್ನು ಕಂದಾಯ ಇಲಾಖೆಯಿಂದ ತರಿಸಿಕೊಡಬೇಕಾಗುತ್ತದೆ ಬೇಕಾದರೆ ತರಿಸಿ ಕೊಡುತ್ತೇನೆ.

ಶ್ರೀ ಆರ್, ಎನ್. ನಾಯಕ್.— ಇದರ ಬಗ್ಗೆ ಹಾಫ್ ಅನ್ ಹವರ್ ಡಿಸ್ಕಷನ್‌ಗೆ ಹಾಕಿಕೊಡಿ. ನಾನು ಈಗಲೇ ಬರೆದು ಕೊಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಡಿಯುವ ನೀರಿನ ಕೊರತೆ

೨೨೫೫. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).— ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್‌ರಾಜ್ ವಕ್ಫ್ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೊರೆದಿರುವ ಕೊಳವೆ ಬಾವಿಗಳಲ್ಲಿ (ತೋಡಿರುವ ಕೊಳವೆ ಬಾವಿಗಳಲ್ಲಿ) ಹೆಚ್ಚು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಆ ಪ್ರದೇಶದ ಜನರು ಕುಡಿಯುವ ನೀರಿನ ಕೊರತೆಯಿಂದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ೧೯೮೮–೮೯ನೇ ಸಾಲಿನಲ್ಲಿ ಪ್ರತಿ ಮಂಡಲ್ ಪಂಚಾಯಿತಿಗೆ ೫ ಬಾವಿ ಒದಗಿಸುವ ಯೋಜನೆ ಸೂತ್ರವನ್ನು ಸರ್ಕಾರ ಹಾಕಿಕೊಳ್ಳಲು ಉದ್ದೇಶಿಸಿದೆಯೇ ?

ಶ್ರೀ ಆಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್. ವಕ್ಫ್ ಮತ್ತು ಪಶುಸಂಗೋಪನಾ ಮಂತ್ರಿಗಳು).—

ಅ) ಇಲ್ಲ.

ಆ) ಇಲ್ಲ.

ಇ) ೧೯೮೮–೮೯ನೇ ಸಾಲಿಗೆ ರೂಪಿಸಿರುವ ನಿಯಮಾವಳಿಗಳನ್ವಯ ಕೊಳವೆ ಬಾವಿಗಳನ್ನು ಕೊರೆಯಲು ಯೋಜಿಸಿದೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೊರೆದಿರುವ ಕೊಳವೆ ಬಾವಿಗಳಲ್ಲಿ ಹೆಚ್ಚು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಎಂದರೆ ''ಇಲ್ಲ'' ಎಂದು ಹಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ. ಈ ವಿಚಾರ ನನ್ನ ಗಮನಕ್ಕೆ ಬಂದ ಮೇಲೆಯೇ ನಾನು ಪ್ರಶ್ನೆ ಕೇಳಿದ್ದೇನೆ. ಇದರ ಬಗ್ಗೆ ಒಂದು ಸಮೀಕ್ಷೆ ಮಾಡಿ ಉತ್ತರ ಕೊಡುವಷ್ಟು ಸೌಜನ್ಯವೂ ಸರ್ಕಾರದವರಿಗೆ ಇಲ್ಲದಿದ್ದರೆ ನಿಜವಾಗಿಯೂ ಇವರು ಬೇಜವಾಬ್ದಾರಿಯಿಂದ ಉತ್ತರ ಕೊಟ್ಟಿದ್ದಾರೆ ಎಂದು ಹೇಳಬೇಕಾಗುತ್ತದೆ, ಆ ರೀತಿ ನಾನು ಭಾವಿಸಬೇಕಾಗುತ್ತದೆ. ಇದಕ್ಕೆ ಸಮರ್ಪಕವಾದ ಉತ್ತರವನ್ನು ಯಾವ ದಿವಸದಲ್ಲಿ ಕೊಡುತ್ತೀರಿ ಎಂಬುದನ್ನು ತಿಳಿಸಬೇಕೆಂದು ತಮ್ಮ ಮೂಲಕ ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ಸಮಗ್ರವಾದ ಉತ್ತರವನ್ನು ಕೊಡುವುದು ಸಾಪೇಕ್ಷವಾದ ಪದ. ಆದರೆ ಇಲ್ಲಿ ಉಡಾಫೆ ಉತ್ತರ ಕೊಡುವ ಉದ್ದೇಶ ಯಾರಿಗೂ ಇಲ್ಲ. ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆನ್ನುವುದಂತೂ ಸತ್ಯ. ಆಕಸ್ಮಾತ್ ಮಾನ್ಯ ಸದಸ್ಯಿಣಿಯವರಿಗೆ ಈ ಬಗ್ಗೆ ಏನಾದರೂ ಗಮನಕ್ಕೆ ಬಂದಿದ್ದರೆ ನನಗೆ ತಿಳಿಸಲಿ ನಾನು ಆ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಇದು ಟೂಮಚ್ ಆಯಿತು. ನೀವು ಒಂದು ಐದು ಜನ ಯಾವಾಗಲೂ ಇದೇ ರೀತಿ ಮಾಡುತ್ತೀರಿ.

(ಗೊಂದಲ)

** ** **

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀಮಾನ್ ನಾಯಕ್‌ರವರು ಮತ್ತು ಇತರರು ಏನು ಮಾತನಾಡಿದ್ದಾರೋ ಅದನ್ನು ನಾನು ಎಕ್ಸ್‌ಪಂಜ್ ಮಾಡುತ್ತೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಮೊನ್ನೆ ದಿವಸ ಈ ಮನೆಯಲ್ಲಿ ಒಂದು ಪ್ರಶ್ನೆ ಕೇಳಿದರು. ಯಾರೆಂದರೆ ಮಾನ್ಯ ವಿರೋಧಪಕ್ಷದ ನಾಯಕಿಯರಾದ ಶ್ರೀಮತಿ ನಾಗರತ್ನಮ್ಮನವರು. ಆಗ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅವರು ಏನು ಪ್ರಶ್ನೆ ಕೇಳಿದ್ದರೆಂದರೆ ಇಡೀ ರಾಜ್ಯದಲ್ಲಿ ಇರತಕ್ಕಂಥ ಕೊಳವೆ ಬಾವಿಗಳ ಪೈಕಿ ಈಗ ಎಷ್ಟು ಕೆಲಸ ಮಾಡುತ್ತಿವೆ ? ಎಷ್ಟು ಕೆಲಸ ಮಾಡುತ್ತಿಲ್ಲವೆಂದು ಕೇಳಿದಾಗ ಅವರು ಹೇಳಿದರು ಕೆಲಸ ಮಾಡದೇ ಇರತಕ್ಕ ಸುಮಾರು ೬ ಸಾವಿರ ಕೊಳವೆ ಬಾವಿಗಳು ರಿಪೇರ್ಸ್‌ನಲ್ಲಿವೆ ಎಂದು. ಹಾಗಾದರೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ಕೊಳವೆ ಬಾವಿಗಳೂ ವಿಫಲವಾಗಿಲ್ಲವೇ? ಇದೇ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಇದು ನಮ್ಮ ಗಮನಕ್ಕೆ ಬಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಇದೇ ಸರಿಯಾದ ಉತ್ತರವೆಂದು ಹೇಳಿತಕ್ಕಂಥಾದ್ದು ಸರಿಯೇ ? ಅವರು ಕೊಟ್ಟಿರುವುದು ಡಿಪ್ಲಿಕ್ಟ್‌ವೈಸ್ ಫಿಗರ್ಸ್. ಈ ಉತ್ತರವಾದರೂ ಸರಿಯಾಗಿ ಇರದಿದ್ದರೆ ಹೇಗೆ ?

ಶ್ರೀ ಗೋಪಾಲ ಮಂಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಮಾನ್ಯ ಕಾನಡೆಯವರೇ ನೀವು ಆಗಾಗ ಎದ್ದೆದ್ದು ನಿಂತು ಮಾತನಾಡುವುದು ಸರಿಯಲ್ಲ. ನೀವು ಚೆನ್ನಾಗಿ ಪ್ರಶ್ನೆ ಕೇಳುತ್ತೀರಿ. ಆದರೆ ನಿಮ್ಮ ವರ್ತನೆ ಸರಿಯಾಗಿಲ್ಲ.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ಎಲ್ಲಾ ವಿಷಯಗಳನ್ನೂ ರಾಜಕೀಯ ದೃಷ್ಟಿಕೋನದಿಂದ ನೋಡತಕ್ಕಂಥ ನಾಯಕ್‌ರವರು ಛೀಳಿದರು ಈ ಸರ್ಕಾರಕ್ಕೆ ಕಣ್ಣು ಇಲ್ಲ, ಹೃದಯವಿಲ್ಲ, ಎಂದು ಅವರು ಮಾತನಾಡುವುದನ್ನು ನೋಡಿದರೆ ಅವರು ತಮ್ಮ ಸಮುಚಿತ್ವವನ್ನು ಕಳೆದುಕೊಂಡು ಮಾತನಾಡುತ್ತಿದ್ದಾರೆ.ವಿರೋಧಕ್ಕೆ ವಿರೋಧ ಮಾಡುವುದು ಸರಿಯಲ್ಲ. ಸೌಜನ್ಯದಿಂದ ನೋಡುವುದೂ ಬೇಕು. ಕಣ್ಣು ಇಲ್ಲದೆ ಪ್ರಶ್ನೆಗೆ ಉತ್ತರ ಕೊಡುವುದು ಹೇಗೆ ? ದಯವಾಡಿ ಗಮನಿಸಿ. ಗೊತ್ತಿದ್ದ ಉತ್ತರ ಕೊಡುತ್ತೇನೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಕೊಳವೆಬಾವಿಗಳು ಹೆಚ್ಚು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಮಾನ್ಯ ಸದಸ್ಯಿಣಿಯವರು ಪ್ರಶ್ನೆ ಕೇಳಿದ್ದಾರೆ, ಅದಕ್ಕೆ ಹೆಚ್ಚು ಇಲ್ಲವೆಂದು ಉತ್ತರ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ...

*** ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿರುತ್ತದೆ.

ಅಧ್ಯಕ್ಷರು.—ಉತ್ತರ ಕೇಳಿ.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ ಪ್ರತಿಶತ ೧೦ ರಷ್ಟು ಕೊಳವೆ ಬಾವಿಗಳು ವಿಫಲವಾಗಿರತಕ್ಕಂಥಾದ್ದು ಸ್ವಾಭಾವಿಕವಾಗಿ ಇರತಕ್ಕಂಥಾದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರಿಂಟೆಡ್ ಕ್ವೆಶ್ಚನ್‌ನಲ್ಲಿ ಏನಿದೆ ತಾವು ನೋಡಿ...

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ನಿಮಗೆ ಈ ಇಲಾಖೆ ಹೊಸದು, ಅದಕ್ಕೆ ನೀವು ಉತ್ತರ ಕೊಡಲು ವಿಫಲರಾಗಿದ್ದೀರಿ...

ಅಧ್ಯಕ್ಷರು.—ನಾಯ್ಕರೇ ನೀವು ಪರ್ಮಿಶನ್ ಇಲ್ಲದೆ ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡುವುದು ಸರಿಯಲ್ಲ. ನೀವು ನಿಯಮಗಳನ್ನೆಲ್ಲಾ ಗಾಳಿಗೆ ತೂರುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು.—ನೀವೇನೇನು ಮಾತನಾಡಿದ್ದೀರೋ ಅದನ್ನೆಲ್ಲಾ ನಾನು ಎಕ್ಸಪಂಜ್ ಮಾಡುತ್ತೇನೆ. ಈಗ ಇದೇ ರೀತಿ ಮಾಡಿದರೆ ಮುಂದಿನ ಪ್ರಶ್ನೆಗೆ ಹೋಗಬೇಕಾಗುತ್ತದೆ.

ಶ್ರೀ ಆರ್. ಎನ್. ನಾಯಕ್.—ನಾನು ಸಮುಚಿತ್ತ ಕಳೆದುಕೊಂಡಿದ್ದೇನೆಯೇ...

ಶ್ರೀ ಎಂ. ಪಿ. ಪ್ರಕಾಶ್.—ಕಣ್ಣು, ಹೃದಯ ಕಳೆದುಕೊಂಡಿರತಕ್ಕಂಥ ಸರ್ಕಾರ ಇಲ್ಲಿ ಇದೆಯೇ?

(ಗೊಂದಲ)

ಅಧ್ಯಕ್ಷರು.—ಪ್ರಶ್ನೆ ಮುಂದಕ್ಕೆ ಹಾಕುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಕುಳಿತುಕೊಳ್ಳಿ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಈರೀತಿ ನೀವು ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಪ್ರಕಾಶ್‌ರವರು ಯಾವಾಗಲೂ ಸಮಾಧಾನದಿಂದ ಇರುವವರು, ಯಾವಾಗಲೂ ನಗುನಗುತ್ತಾ ಇರುವವರು. ಇವತ್ತು ಇವರು ಏಕೆ ಹೀಗೆ ಕೋಪ ಮಾಡಿಕೊಂಡಿದ್ದಾರೆ ?

ಶ್ರೀ ಎಂ. ಪಿ. ಪ್ರಕಾಶ್.—ಪ್ಲಾನಿವೆಂಟರಿ ಪ್ರೊಸೀಜರ್‌ನಲ್ಲಿ, ಸದಸ್ಯರು ಯಾವ ರೀತಿಯಾಗಿ ಪದ ಬಳಕೆ ಮಾಡುತ್ತಾರೋ ಅದೇ ಧಾಟಿಯಲ್ಲಿ ಸ್ವೀಕಾರ ಮಾಡಬೇಕು. ಎಲ್ಲವನ್ನೂ ಕ್ರೀಡಾ ಮನೋಭಾವದಿಂದ ತಿಳಿದುಕೊಳ್ಳಬೇಕು. ನೀವು ಈ ಸರ್ಕಾರ ಕಣ್ಣು ಮೂಗು ಕಳೆದುಕೊಂಡಿದೆ ಎಂದು ಹೇಳಿದ್ದಕ್ಕೆ ನಾನು ಅಸಮುಚಿತ್ತ ಸದಸ್ಯರು ಎಂದು ಹೇಳಿದೆ. ಆದರೆ ಅದಕ್ಕೆ ಗಂಟು ಮುಖ ಹಾಕಿಕೊಳ್ಳುವುದಕ್ಕೆ ಇದರಲ್ಲಿ ಅಂಥಾದ್ದು ಏನೂ ಇಲ್ಲ.

ಅಧ್ಯಕ್ಷರು.—ನೋಡಿ ಬಂದು ಗಾದೆ ಇದೆ, ''ಅಂದು ಆನ್ನಿಸಿಕೊಂಡ ಚೆಂದ ಗೇಡಿ'' ಅಂತ, ನೀವು ಇವರಿಗೆ ಏನೂ ಅನ್ನಬೇಡಿ. ಅವರೂ ನಿಮಗೆ ಏನೂ ಅನ್ನುವುದು ಬೇಡ.

ನಗರಸಭೆಯಿಂದ ಹೊಸದಾಗಿ ಲೇಔಟ್ ಮಾಡಿಸಿದವರಿಗೆ ಆಗುತ್ತಿರುವ ತೊಂದರೆ

೧೯೭೨ ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಗರಸಭೆಗಳಡಿಯಲ್ಲಿ ಹೊಸದಾಗಿ ನಿರ್ಮಾಣ ಮಾಡುವ ಬಡಾವಣೆಗಳಿಗೆ ಅಭಿವೃದ್ಧಿ ಶುಲ್ಕವನ್ನು ಪಾವತಿ ಮಾಡಿದಾಗ್ಯೂ ಸದರಿ ಬಡಾವಣೆಗಳಿಗೆ ಅಭಿವೃದ್ಧಿ ಕಾರ್ಯಗಳನ್ನು ಮಾಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,